ಬೆಂಗಳೂರು ಡಿಸ್ಟ್ರಿಕ್ಟು.

ಸ್ರ 1871ನೇ ಇಸವಿ ಸೆಪ್ಟಂಬರ್ 28ನೇ ಮುಕ್ತಂ 3237—19ನೇ ನಂಬರ್ ಇಸ್ತಿಹಾರಿನಲ್ಲಿ ವಿಧಾಯಕವಾಗಿರುವ ರೂಲ್ಸ ಪ್ರಕಾರ ಇನಾಂ ಗ್ರಾಮಗಳ ಮಾಲೀಕರು, ತಮ್ಮ ಗ್ರಾಮಗಳ ವಿಚಾರಣೆ ವುದ್ದಿಶ್ಯ ಒಬ್ಬ ಏಜಂಟನ್ನು ನೇಮಿಸಬೇಕೆಂದು ಯಿರುವದ್ದರಿಂದಲೂ ಮತ್ತು ಈ ಡಿಸ್ಟ್ರಿಕ್ಟಿನ ಯಲ್ಲಾ ಇನಾಂ ಗ್ರಾಮಗಳಲ್ಲಿಯೂ ಏಜಂಟರುಗಳು ನೊಕರರ್ ಆಗದೆ ಯಿರುವದಾಗಿ ನಮ್ಮ ನೋಟೀಸಿಗೆ ಬಂದು ಯಿರುವದ್ದರಿಂದಲೂ (ಇದರಿಂದ) ಕಾಯಂಗುತ್ತಾ, ಜೋಡಿ ಮತ್ತು ಸರ್ವಮಾನ್ಯ ಗ್ರಾಮಗಳ ಇನಾಂದಾರ್‌ರಿಗೆ ತಿಳಿಯಪಡಿಸುವದೇನಂದರೆ.

ಈ ತಾರೀಖು ಲಾಗಾಯತು ಒಂದು ತಿಂಗಳು ವಾಯಿದೆ ಕೊಟ್ಟಿರುತ್ತೆ. ಈ ವಾಯಿದೆ ಒಳಗೆ ಇನಾಂದಾರ್‌ರು ತಮ್ಮ ತಮ್ಮ ಗ್ರಾಮಗಳಿಗೆ ಒಬ್ಬ ಏಜಂಟನ್ನ ನೇಮಕಮಾಡಿ ಅಂಥಾ ಏಜಂಟನ ಹೆಸರು ತಾಲ್ಲೂಕು ಅಮಲ್‌ದಾರ್‌ರುಗಳಿಗೆ ತಿಳಿಸಬೇಕು, ಹಾಗೆ ನೊಕರರು ಮಾಡುವದಕ್ಕೆ ತಪ್ಪಿದಲ್ಲಿ ಸದರೀ ನೋಟಿಫಿಕೇಷನ 2ನೇ ರೂಲ್ಸ ಪ್ರಕಾರ ಡೆಪ್ಯೂಟಿ ಕಮ್ಮಿಷನರ ಸಾಹೆಬರವರು ಹೊಂದಿರುವ ಅಧಿಕಾರಗಳನ್ನ ಜಲಾಯಿಸಿ ಒಬ್ಬ ಏಜಂಟನ್ನ ನೇಮಕ ಮಾಡುವದರಲ್ಲಿ ಬಂದೀತು. ಅಂಥಾ ಏಜಂಟು ನಡಿಸುವ ಯೆಲ್ಲಾ ಕೆಲಸಗಳೂ ಇನಾಂದಾರ್‌ರು ಖುದ್ದು ತಾವೇ ನಡಿಸಲ್ಪಟ್ಟಂತೆ ಯೇಣಿಸಲು ಬದ್ಧರಾಗಿರುತ್ತಾರೆ. ಈ ರೂಲ್ಸ ಮತ್ತು ಈ ಇಸ್ತಿಹಾರಿನ ಅಮಲ್ ಬಂದು ಗ್ರಾಮದಲ್ಲಿ ಒಬ್ಬ ಇನಾಂದಾರನಿಗಿಂತ ಹೆಚ್ಚಾಗಿ ಇನಾಂದಾರ್‌ರು ಯಾ ಹಿಸ್ಸೇದಾರ್‌ರು ಯಿರುವ ಗ್ರಾಮಗಳಿಗೆ ಅನ್ವಯಿಸುತ್ತೆ.

ತಾರೀಖು 28ನೇ ಫಿಬ್ರವರಿ ಸ್ರ 1890ನೇ ಇಸವಿ ನೊಕ್ತಾಂ ಬೆಂಗಳೂರು.

ಪಿ. ಆರ್. ಕೃಷ್ಣಮೂರ್ತಿ,
ಡೆಪ್ಯೂಟಿ ಕಮ್ಮಿಷನರ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

1890ನೇ ಇಸವಿ ಮಿ|| ಅರ್ಜೀ ನಂಬರ್ 68.

ಬೆಂಗಳೂರು ನಗರ್ತಪ್ಯಾಟೇಲಿ ಇದ್ದು ಮೃತಪಟ್ಟ ತಿಲ್ಪಿ ನಂಜಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ ತಿಲ್ಪಿ ಸೂರಪ್ಪ, ಮೃತಪಟ್ಟಸದರೀ ನಂಜಪ್ಪನಿಗೆ ತಮ್ಮ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ತಿಲ್ಪಿ ಸೂರಪ್ಪನು ಬೆಂಗಳೂರು ವಾಸಸ್ಥನಾಗಿ ಮೃತಪಟ್ಟ ತಿಲ್ಪಿ ನಂಜಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಸೂರಪ್ಪನ ಅರ್ಜೀಯನ್ನು 1890ನೇ ಇಸವಿ ಮಾರ್ಚಿ ತಿಂಗಳು ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ನಂಜಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1890ನೇ ಇಸವಿ ಫಿಬ್ರವರಿ ತಿಂಗಳು 27ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1890ನೇ ಇಸವಿ ಅರ್ಜೀ ನಂಬರ್ 162.

ಮುಳಬಾಗಲ್ ತಾಲ್ಲೂಕು ಪದ್ಮಗಟ್ಟದಲ್ಲಿದ್ದು ಮೃತಪಟ್ಟ 1ನೇ ಮುದ್ದಪ್ಪ, 2ನೇ ದಾನಪ್ಪ ಇವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ವುಚ್ಚಬಸಪ್ಪ, ಮೃತಪಟ್ಟ ಸದರೀ ಮುದ್ದಪ್ಪಗೆ ಚಿಕ್ಕಪ್ಪನ ಮಗ 2ನೇ ದಾನಪ್ಪಗೆ ತಮ್ಮ ಆಗಬೇಕೆಂಬ ಹಕ್ಕುದಾರೀ ಮೇಲೆ ಪದ್ಮಗಟ್ಟದ ಸ್ಥಳದ ವುಚ್ಚಬಸಪ್ಪನು ಪದ್ಮಗಟ್ಟದ ವಾಸಸ್ಥರಾಗಿ ಮೃತಪಟ್ಟ 1ನೇ ಮುದ್ದಪ್ಪ 2ನೇ ದಾನಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ವುಚ್ಚಬಸಪ್ಪನ ಅರ್ಜೀಯನ್ನು 1890ನೇ ಇಸವಿ ಮಾರ್ಚಿ ತಿಂಗಳು ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ 1ನೇ ಮುದ್ದಪ್ಪ 2ನೇ ದಾನಪ್ಪನ ಆಸ್ತಿಗೆ ಹಕ್ಕುದಾರರಾದ ವಿಶಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1890ನೇ ಇಸವಿ ಮಾರ್ಚಿ ತಿಂಗಳು 1ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿ ಇಧೆ.

ಎಲ್. ಅನಂತಸ್ವಾಮಿರಾವ್,
ಸಬ್ ಜಡ್ಜ.